ಬರ್ಲಿ ಆಮೇಲೆ!...' ತಟ್ಟನೆದುರು ಬಿದ್ದ ಜಲಜಾಕ್ಷಿಯ ಆತಂಕಕ್ಕೆ, 'ಥೊ.. ಇಲ್ಲೆಂತಾ ಕಾಯಂ ಇರತಾನೇನೆ ಅವನು? ಕಲಾಯಿ ಹಾಕಿ ನಾಳೆ ಹೋಗ್ತಾನಪ. ಹಾಂಗೆ ನೋಡಿದ್ರೆ ಸಣ್ಣೆರುವಾಗಿಂದ ನಾನು ನೋಡಿದವನೇ. ಎಂತಾ ಸಂಶಯವೇನಪ ಹೆಂಗಸ್ರಿಗೆ!... ನಾನೇನು ಅವನ್ನ ಕರೀಲಿಲ್ಲ; ಅವನಾಗೆ ಬಂದ. ಎಂತಾಮಾಡದು ಈಗ? ಆದದ್ದಾಯ್ತು... ಸ್ವಲ್ಪ ಎಂತದಾದ್ರು ಕುಡಿಯಕ್ಕೆ ಕೊಡೆ ಅವಗೂ' ಸಮಜಾಯಿಶಿಗೆ ಯತ್ನಿಸಿದರು. ರಾತ್ರಿ ಜಗುಲಿಯಲ್ಲಿ ಊಟ ಬಡಿಸಿದರು. ಗಬಗಬನೆ ಉಣ್ಣುವವನನ್ನು, 'ಸಾವಕಾಶ ಉಣ್ಣೋ... ಇನ್ನು ಮಲಗೊದೇ ಕೆಲಸ; ಮತ್ಯಂತಾ ಇರತದೆ?' ಅಂತ ಉಪಚಾರ ಹೇಳುತ್ತ ಮಲಗಲು ಕಂಬಳಿ, ಹಳೆಯದೊಂದು ಜಮಖಾನ ತಂದಿಟ್ಟರು.

ಬೆಳ್ಳಂಬೆಳಗ್ಗೆ ಅಟ್ಟದಡಿಗೆ ಹೊಂಡಮಾಡಿ ಮಷಿನ್ನು ಸ್ಥಾಪಿಸಿದವ ಪಾತ್ರೆಯೆಲ್ಲ ಕೊಡಿ ಅಂದ. ಕೆಲಸದಾಳು ಕುಪ್ಪಯ್ಯ ಬರುವುದು ತಡ, ಮಗಸೊಸೆ ನೆಂಟರಮನೆಗೆ ಹೋಗಿದ್ದಾರೆ. ತಾವೇ ಮೆತ್ತಿಂದ ಕೊಳದಪ್ಪಲೆ, ಕಡಾಯ, ತಾಟು, ಬೋಗುಣಿಗಳನ್ನೆಲ್ಲ ಇಳಿಸಿಟ್ಟವರಿಗೆ ಮೂರು ಉರಳಿಗಳನ್ನು ತರುವುದು ಮಾತ್ರ ಸಮಸ್ಯೆಯಾಯಿತು. ಕಣ್ಣಲ್ಲೆ ಅಸಮಾಧಾನವನ್ನು ತೀವ್ರ ಸ್ಥಾಯಿಯಲ್ಲಿ ಬಿತ್ತರಿಸುತ್ತಿರುವ ಹೆಂಡತಿಯೆದುರು ತಮ್ಮ ಅಸಹಾಯಕತೆಯನ್ನು ಮುಖಭಾವದಲ್ಲೆ ತೋಡಿಕೊಳ್ಳುತ್ತ ಅಕ್ರಾಮನನ್ನು ಮೆತ್ತಿಗೆ ಕರೆದೊಯ್ದರು. ಒಂದೊಂದಾಗಿ ತಲೆಯಮೇಲೆ ಹೊತ್ತು ಮೂರನ್ನೂ ಕೆಳಗಿಳಿಸಿದವ, 'ಸೈತಾನನ ಒಜ್ಜೇದು... ಇದೆಲ್ಲಿ ಸಿಕ್ತಾ?' ಅಂತ ಉಸಿರುಬಿಡುತ್ತ ವಿಶ್ರಮಿಸಲು ಕುಳಿತ. ಸುಧಾರಿಸಿಕೊಂಡವ ಮಷೀನು ತಿರುಗಿಸುತ್ತ ಜ್ವಾಲೆಯೆಬ್ಬಿಸಿ ಪಾತ್ರೆ ಕಾಯಿಸಲು ಸುರುಮಾಡಿದ. ತವರದ ಬಿಲ್ಲೆಗಳನ್ನು ಕುಟ್ಟಿ ಪುಡಿಮಾಡಿಕೊಂಡು ಕಾದ ಪಾತ್ರೆಯೊಳಗೆ ಉದುರಿಸಿ, ಅರಿವೆಮುದ್ದೆ ಹಿಡಿದು ಒಳಗಿಡೀ ಪಸರಿಸಿ ಕಲಾಯಿ ಮಾಡುವುದರಲ್ಲಿ ತಲ್ಲೀನನಾದ. ಮಧ್ಯಾಹ್ನದ ಹೊತ್ತಿಗೆ ಎಲ್ಲಾ ಮುಗಿಸಿ ಮಜೂರಿಯಿಸಿದುಕೊಂಡವ ಸಂತೋಷ ತುಳುಕಿಸುತ್ತ ಎರಡೆರಡು ಸಾರಿ ನಮಸ್ಕಾರ ಮಾಡಿ ಹೊರಟುಹೋದ. ಆಡಳ್ಳಿ ನೆಂಟರ ಮನೆಯಿಂದ ವಾಪಸು ಬಂದ ಪುರುಷೋತ್ತಮ–ಸುಧಾ ಮೋಟರುಸೈಕಲಿಂದಿಳಿಯುತ್ತಿದ್ದಂತೆ ಕಟ್ಟೆಯಮೇಲೆ ರಾಶಿಯಾದ ಪಾತ್ರೆಗಳು ಅಚ್ಚರಿ ಮೂಡಿಸಿದವು.

★★★

ಬಂಡೆಹಳ್ಳಿ ಕ್ರಾಸಿನಲ್ಲಿ ಯಾರೋ ಒಂದು ಗುಡಿಸಲು ಕಟ್ಟುವ ತಯಾರಿಯಲ್ಲಿದ್ದಾರೆ ಎಂಬ ಸುದ್ದಿಯನ್ನು ಮರುದಿನ ಬೆಳಗಿನ ಬಸ್ಸಿಗೆ ಬಂದವರೊಬ್ಬರು ತಂದರು. ಅಂತಾ ಜಾಗದಲ್ಲಿ ಯಾಕೆ ಯಾರಾದರು ಗುಡಿಸಲು ಕಟ್ಟತಾರೆ ಅಂತ ರಾಯರು ಅಚ್ಚರಿಪಟ್ಟರು. ಮಧ್ಯಾಹ್ನ ಊಟಮುಗಿಸಿ ಜಗುಲಿಗೆ ಬಂದವರಿಗೆ ತಗ್ಗಿಳಿದು ಯಾರೋ ಬರುವುದು ಕಾಣಿಸಿತು. ಅಕ್ರಾಂ ಅಂಗಳಕ್ಕೆ ಬಂದವ, 'ಮನೆಲ್ಲೆ ಇದ್ದೀರಿ ಖುದಾದು ಮೆಹರ್ಬಾನಿ!...' ಅಂತ ನಮಸ್ಕರಿಸಿದವ ತನಗೆ ಒಂದಿಷ್ಟು ಅಡಕೆಸೋಗೆ ಕೊಡಬೇಕು, ಇಲ್ಲ ಅಂತ ಹೇಳಬಾರದು ಅಂತ ಜುಲುಮೆಯ ಬೇಡಿಕೆಯೊಂದಿಗೆ ನಿತ್ತುಬಿಟ್ಟ. ಅನಿರೀಕ್ಷಿತದ ನಡುವೆ ಮುಕುಂದರಾಯರಿಗೇನೊ ಹೊಳೆದು, 'ಬಂಡೆಹಳ್ಳಿ ಕ್ರಾಸಿನಲ್ಲಿ ನೀನೆಂತದಾದ್ರು ಕಟ್ಟತಿದ್ದೇನೋ?' ಕೇಳಿದರು. 'ಹೌದ್ರಾ, ಒಂದು ಗುಡುಸ್ಲು ಹಾಕಿ ಎಂತದಾದ್ರು ಮಾಡ್ವ ಹೇಳಿ' ಅಂದ. ಅವರ ಮುಖದಲ್ಲಿ ಸಂದೇಹ ಕಂಡು, 'ಆಮದನಿ ಏನೂ ಇಲ್ಲರ; ಯಾವ ಕೆಲಸಾನು ಸಿಕ್ಕುದಿಲ್ಲ. ನಿನ್ನೆ ನೀವು ಕೊಟ್ಟದ್ರಲ್ಲಿ ಈಗಿಷ್ಟು ಮಾಡ್ಬಹುದು ಅಂತ ಧೈರ್ಯ...'

'ಮತ್ತೆ ಸಣ್ಣ ಪುಟ್ಟ ವ್ಯಾಪಾರ ಮಾಡತಿದೀ ಅಂದೆ?'

'ಏನಂತ ಹೇಳೂದ್ರ?... ನಾವು ಒಂದೂರಲ್ಲಿ ಇದ್ದವರಲ್ಲಾಗಿತ್ತು. ಹೊಸ್ತಾಗಿ ಯಾವ ಕೆಲ್ಸಕ್ಕೆ ಕೈ ಹಾಕಿದ್ರು ಅದರಲ್ಲಿ ಗಟ್ಟಿಯಾಗಿ ಕೂತವ್ರಿರತಿದ್ರು... ನನ್ನ ಬಿಡತಾರ? ಊರೂರಿಗೆ ಅಲದು ಕೊಳೆ ಅಡಕೆ ಖರೀದಿ ಮಾಡಾಯ್ತು... ಹಣ್ಣಿನ ವ್ಯಾಪಾರ, ಚರ್ಮದ ವ್ಯಾಪಾರ, ಎತ್ತಿನ ಕೊಂಬು